ೀರಿದಂತೆ, 1990-91 ನೇ ವರ್ಷದಿಂದ ಶೇಂದಿ ಮಾರಾಟವನ್ನು ನಿಷೇಧಿಸಲಾಯಿತು. ಆದರೆ ದಕ್ಷಿಣ ನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮರಗಳು ಲಭ್ಯವಿಲ್ಲದ ಕಾರಣ, ಅಲ್ಲಿ ಶೇಂದಿ ಇಳಿಸಲು ಶನುಮತಿ ನೀಡಲಾಗಿದೆ.

ಇ) ಇಲ್ಲ.

ೊಡಗು ಜಿಲ್ಲೆಯಲ್ಲಿ ವಿದ್ಯುತ್ ಅಪಘಾತಗಳಿಂದ ಮೃತಪಟ್ಟವರ ಕುರಿತು

2081 - ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಬಾರಿ ಮಳೆಯಿಂದ ಕೊಡಗು ಜಿಲ್ಲೆಯಲ್ಲಿ, ವಿದ್ಯುತ್ ಅಪಘಾತಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು?

ಆ) ವಿದ್ಯುತ್ ಅಪಘಾತಗಳಿಂದ ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರವು ಪರಿಹಾರ ಧನವನ್ನು ವಿತರಣೆ ಮಾಡಿದೆಯೇ?

ಇ) ಈ ಅಪಘಾತದಿಂದ ಮೃತಗೊಂಡಿರುವ ಒಬ್ಬ ವ್ಯಕ್ತಿಯ ಕುಟುಂಬಕ್ಕೆ ಸರ್ಕಾರವು ನಿಗಧಿಪಡಿಸಿರುವ ಹಣದ ಮೊತ್ತವೆಷ್ಟು?

ಈ) ಪರಿಹಾರ ಧನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ?

ೀ ಶರಣಪ್ಪ ಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) 5 (ಐದು).

ಆ) ಮುಖ್ಯ ವಿದ್ಯುತ್ ಪರಿವೀಕ್ಷಕರು, ಇವರಿಂದ ವರದಿಯು ಬಂದ ನಂತರ, ವಿದ್ಯುತ್ ಪಘಾತದಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ಧನವನ್ನು ವಿತರಿಸಲಾಗುವುದು.

ಇ) ಅಪಘಾತದಿಂದ ಮೃತಗೊಂಡಿರುವ ಒಬ್ಬ ವ್ಯಕ್ತಿಯ ಕುಟುಂಬಕ್ಕೆ ಈ ಕೆಳಕಂಡಂತೆ ರಿಹಾರ ಧನವನ್ನು ನಿಗದಿಪಡಿಸಲಾಗಿದೆ.

1) ಮೃತಪಟ್ಟ ವ್ಯಕ್ತಿಯ ವಯಸ್ಸು - 18 ವರ್ಷಕ್ಕಿಂತ ಕಡಿಮೆ ಇದ್ದರೆ ರೂ. 30,000-00

2) ಮೃತಪಟ್ಟ ವ್ಯಕ್ತಿಯ ವಯಸ್ಸು - 18 ವರ್ಷಕ್ಕಿಂತ ಮೇಲ್ಪಟ್ಟಿದ್ದರೆ ರೂ. 50,000-00

ಈ) ಯಾವುದೇ ಪ್ರಸ್ತಾವನೆ ಇರುವುದಿಲ್ಲ.